ತೀವ್ರತೆಯೇ ಅವರ ಶಕ್ತಿಯೆಂದು ನನಗೆ ಅನಿಸುತ್ತದೆ. ಅವರು ಪ್ರೇಮದಷ್ಟೇ ತೀವ್ರವಾಗಿ ನೋವನ್ನೂ ಉಣ್ಣಬಲ್ಲರು. ಅಷ್ಟೇ ತೀವ್ರವಾಗಿ ಬದುಕಲೂ ಬಲ್ಲರು. ಒಂದು ಘಟ್ಟದಿಂದ ಮತ್ತೊಂದಕೆ ಸರಿಯುವುದು ಅವರಿಗೆ ಸಹಜವೇನೋ ಎಂಬಷ್ಟು ಸರಾಗವಾಗಿರುತ್ತದೆ. ಗಂಡು ಹೊರನೋಟಕ್ಕೆ ಧೈರ್ಯಶಾಲಿಯೆನಿಸಿದರೂ ಎಷ್ಟೊಂದು ಅಳ್ಳೆದೆಯವನು! ಪ್ರೇಮವನ್ನಾಗಲೀ ಅಥವಾ ಯಾವುದನ್ನೇ ಆಗಲಿ ಅಷ್ಟೊಂದು ತೀವ್ರತರವಾಗಿ ಹಚ್ಚಿಕೊಂಡಿಲ್ಲವೆಂಬಂತೆ ಬದುಕುತ್ತ ಹೋಗುವ ಅವನು ಅದು ಕಳೆದು ಹೋಗುವಾಗ ಅನುಭವಿಸುವ ಚಡಪಡಿಕೆಯಿದೆಯಲ್ಲ, ಅದು ಬಹಳವೇ ದಾರುಣವಾಗಿರುತ್ತದೆ. ಏನೇ ಹೇಳಿ ಹೆಣ್ಣಿನ ತೀವ್ರತೆಯೇ ಅವಳ ಬಿಡುಗಡೆಯ ದಾರಿ. ಗಂಡಿನ ಅಸಡ್ಡಾಳತೆಯೇ ಅವನ ದುರಂತ. ಇದು ನನಗೆ ಅನಿಸುವುದು, ನನ್ನ ಅನಿಸಿಕೆ. ಮತ್ತೆ ನಾನೊಬ್ಬ ಬರಹಗಾರ ಅಲ್ಲ. ನಾನು ಯಾವ ವಿಷಯದ ಆಳಕ್ಕೂ ಹೆಚ್ಚಿಗೆ ಇಳಿಯುದಿಲ್ಲ ಎಂಬುವುದನ್ನು ನೀವು ಮೊದಲು ಮನಸಿನಲ್ಲಿಟ್ಟುಕೋಬೇಕು. ಅವನು ಆಕಾಶ ನೋಡುತ್ತ ಜೋರಾಗಿ ನಕ್ಕು, 'ಇಷ್ಟೇ ಕತೆ' ಎಂದು ಕೈ ಕಟ್ಟಿ ಕುಳಿತ. ಅವನ ಮೀಸೆಯಡಿಯಲ್ಲಿ ಅವನ ತುಟಿಗಳು ಅವಿತಿದ್ದವು. ಕಣ್ಣುಗಳು ಭಾವನೆಯನ್ನು ಬಿಡಬಾರದೆಂಬ ಹಟದಲ್ಲಿ ಸುಮ್ಮನೆ ಕುಳಿತಿದ್ದವು. 'ಸರೀ ಎಲ್ಲವನೂ ಇಷ್ಟು ಚೆಂದಗೆ ಹೇಳಿದಿರಲ್ಲ, ಇದರಲ್ಲಿ ನಿಮ್ಮ ಪಾತ್ರ ಏನು ಮಾರಾಯರೆ? ಈಗಲಾದರೂ ಹೇಳಿ' ನಾನು ಮತ್ತೆ ಕೇಳಿದೆ. ಅವನು ನಿಗೂಢವಾಗಿ ನಕ್ಕ. 'ಅದನ್ನ ತಿಳಕೊಳ್ಳೋದರಿಂದ, ಕತೆಯ ಆಯಾಮವೇನೂ ಬದಲಾಗಲ್ಲ ಬಿಡಿ ಸರ್' ಹಾಗನ್ನುತ್ತ ಅವನು ಎದ್ದ. ಅವನ ಮೇಲೆ ಉಕ್ಕಿದ ಸಿಟ್ಟನ್ನು ಮರೆಮಾಚಲು ನಾನು ಸುಮ್ಮನೆಂಬಂತೆ ಮೊಬೈಲಿನೊಳಗೆ ಇಣುಕಿದೆ. ಈಶಾನ್ಯೆ ಬಂಡಿ ಬಂಡಿ ಮೆಸೇಜ್ ಹಾಕಿದ್ದಳು. 'ನೀವೊಬ್ಬ ಹಿಪೋಕ್ರೇಟ್, ನಿಮಗೆ ನಾನು ಬೇಕು, ಆದರೆ ನನ್ನೊಂದಿಗೆ ಮದುವೆ ಬೇಡ, ಸಮಸ್ಯೆಗಳು ಬೇಡ. ಬೀದಿಯಲ್ಲಿ ಆಟವಾಡುವುದರಲ್ಲಿ ತಪ್ಪೇನಿಲ್ಲ, ಎದುರು ಮನೆಯವನ ಕಿಟಕಿ ಗ್ಲಾಸು ಒಡೆಯದಂತೆ ಜೋಪಾನವಹಿಸಿದರೆ ಸಾಕು ಅಲ್ವಾ?' ಎಂದು ಅಪಾರ ರೊಚ್ಚಿನಿಂದ ಕೇಳಿದ್ದಳು. ಇದಕ್ಕೆ ಉತ್ತರವಾಗಿ ಅತ್ಯಂತ ಸರಳವಾಗಿ 'ಎಸ್' ಎಂದು ಟೈಪಿಸಿ ಕಳಿಸಿ ನಮ್ಮ ಈ ಇಡೀ ಪ್ರಕರಣಕ್ಕೆ ತೆರೆ ಎಳೆಯಬಹುದಿತ್ತು. ಅಷ್ಟರಲ್ಲಿ ಪ್ರದೀಪನ ಮೆಸೆಜ್ ಬಂತು– ಕತೆ ರೆಡಿಯಾ? ನಾನೆಂದೆ, 'ಎಸ್'.

**ಶಾಂತಿ ಕೆ.ಎ.**

ಕೊಡಗಿನವರಾದ ಶಾಂತಿ ಕೆ. ಅಪ್ಪಣ್ಣ ಪ್ರಸ್ತುತ ರೈಲ್ವೆ ಇಲಾಖೆಯಲ್ಲಿ ಚೆನ್ನೈಯಲ್ಲಿ ಶುಶ್ರೂಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ವಿದ್ಯಾಭ್ಯಾಸ– ಪಿಯೂಸಿ ಬಳಿಕ ಡಿಪ್ಲೋಮಾ ಇನ್ ನರ್ಸಿಂಗ್. ಅವರ ಕಥಾಸಂಗ್ರಹ–'ಮನಸು ಅಭಿಸಾರಿಕೆ'.